**ಚಿಕ್ಕನಾಯಕನ ಹಳ್ಳಿಯಲ್ಲಿ ಸ್ಟೇಡಿಯಂ ನಿರ್ಮಾಣ**

2283 -ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಯುವಜನ ಸೇವೆ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಿಕ್ಕನಾಯಕನಹಳ್ಳಿಯಲ್ಲಿ ಸ್ಟೇಡಿಯಂ ನಿರ್ಮಿಸಲು ಬಹಳ ಹಿಂದೆಯೇ ತುಮಕೂರು ಜಿಲ್ಲಾ ಪರಿಷತ್ ತೀರ್ಮಾನಿಸಿ ಜಮೀನು ಗುರ್ತಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಅಂದಿನಿಂದ ಇಂದಿನವರೆವಿಗೂ ಅಲ್ಲಿ ಸ್ಟೇಡಿಯಂ ನಿರ್ಮಾಣ ಮಾಡಲು ಕ್ರಮ ಜರುಗಿಸಿಲ್ಲದಿರುವುದಕ್ಕೆ ಕಾರಣವೇನು?*

ಇ) *ಈಗಲಾದರೂ ಸ್ಟೇಡಿಯಂ ನಿರ್ಮಾಣ ಮಾಡಲು ಕ್ರಮ ಜರುಗಿಸಲಾಗುವುದೆ?*

ಈ) *ಹಾಗಿದ್ದಲ್ಲಿ, ಯಾವ ಸಾಲಿನಲ್ಲಿ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು?*

ಶ್ರೀ ನಾಗಪ್ಪ ಸಾಲೋನಿ (ಯುವಜನ ಸೇವಾ ಮತ್ತು ಕ್ರೀಡಾ ಸಚಿವರು) :

ಅ) ಹೌದು. ಬಂದಿದೆ.

ಆ) ಜಮೀನನ್ನು ಶಿಕ್ಷಣ ಇಲಾಖೆಯಿಂದ ಯುವಜನ ಸೇವಾ ಇಲಾಖೆ ವರ್ಗಾಯಿಸಿದ ತಕ್ಷಣ ಕ್ರಮ ಜರುಗಿಸಲಾಗುವುದು.

ಇ) ಜಮೀನು ಲಭ್ಯವಾದ ತಕ್ಷಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಈ) ಜಮೀನು ಲಭ್ಯವಾದ ತಕ್ಷಣ ಕಾಮಗಾರಿಯನ್ನು ಮುಂದಿನ ಹಣಕಾಸಿನ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗುವುದು.

**ಚಿಕ್ಕನಾಯಕನಹಳ್ಳಿಯಲ್ಲಿ ಲೋಕೋಪಯೋಗಿ ಕಟ್ಟಡಗಳ ವಿಳಂಬ**

2284 - ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಿಕ್ಕನಾಯಕನಹಳ್ಳಿಯಲ್ಲಿ ಲೋಕೋಪಯೋಗಿ ಇಲಾಖೆಯವರು ನಿರ್ಮಾಣ ಮಾಡುತ್ತಿರುವ ಕಟ್ಟಡಗಳು ಯಾವುವು? ಎಷ್ಟು ವರ್ಷಗಳಿಂದ ಈ ಕಟ್ಟಡಗಳ ನಿರ್ಮಾಣ ಕಾರ್ಯ ನಡೆಯುತ್ತಿದೆ?*

ಆ) *ಅವುಗಳ ನಿರ್ಮಾಣ ಕಾರ್ಯ ಈಗ ಹಾಲಿ ಯಾವ ಹಂತದಲ್ಲಿದೆ?*

ಇ) *ಅದರ ಪ್ರಗತಿ ಕುಂಠಿತವಾಗಲು ಕಾರಣ ಯಾರು ಹಾಗೂ ಅವರ ವಿರುದ್ಧ ಸರ್ಕಾರ ಕ್ರಮ ಜರುಗಿಸುವರೆ?*